# ಸಕ್ಕರೆ ಕಾರ್ಖಾನೆಗೆ ವಿಡಿಐಟಿ ಪ್ರಾಧ್ಯಾಪಕ ಭೇಟಿ




ಧಾರವಾಡ: ಕೆ ಎಲ್ ಎಸ್ ವಿ ಡಿ ಐ ಟಿ ಹಳಿಯಾಳದ ಪ್ರಾಧ್ಯಾಪಕರು ಇ ಐ ಡಿ ಪ್ಯಾರಿ ಶುಗರ್ ಕಾರ್ಖಾನೆಗೆ ಜೂನ್ 13ರಂದು ಭೇಟಿ ನೀಡಿದರು. ಸಕ್ಕರೆ ಉತ್ಪಾದನೆಯಲ್ಲಿ ಬಳಸಲಾಗುವ ಕಚ್ಚಾ ವಸ್ತುಗಳು, ರಾಸಾಯನಿಕಗಳು ಹಾಗೂ ವಿವಿಧ ವಿಭಾಗದಲ್ಲಿನ ವಿದ್ಯುತ್ ಸಲಕರಣೆಗಳ ಕುರಿತಾಗಿ ಸಂಪೂರ್ಣ ಮಾಹಿತಿಯನ್ನು ಇನ್ಸ್ಟ್ರುಮೆಂಟೇಶನ್ ವಿಭಾಗದ ಉಪ ವ್ಯವಸ್ಥಾಪಕ ಹಾಗೂ ಮಹಾವಿದ್ಯಾಲಯದ ಇ ಆಂಡ್ ಸಿ ವಿಭಾಗದ ಮಾಜಿ ವಿದ್ಯಾರ್ಥಿ ಅರುಣ್ ಪಾಟೀಲ್ ಪ್ರಾಧ್ಯಾಪಕರುಗಳಿಗೆ ನೀಡಿದರು.

ಕಬ್ಬಿನ ಸಿಪ್ಪೆಯಿಂದ ವಿದ್ಯುತ್ ಶಕ್ತಿ ತಯಾರಿಕಾ ವಿಧಾನವನ್ನು ವಿವರಿಸುತ್ತ, ವಿವಿಧ ವಿಭಾಗದಲ್ಲಿ ಅಳವಡಿಸಿರುವ ಮಾಪನ ಸಲಕರಣೆಗಳ ಕುರಿತಾಗಿ ವಿವರಿಸಿದರು. ಇ ಐ ಡಿ ಪ್ಯಾರಿ ಸಕ್ಕರೆ ಕಾರ್ಖಾನೆಯ ವಾರ್ಷಿಕ ವಹಿವಾಟು ಹಾಗೂ ಪರಿಸರ ಸಂರಕ್ಷಣೆಗೆ ಕಾರ್ಖಾನೆಯು ತೆಗೆದುಕೊಂಡಿರುವ ಉಪಕ್ರಮಗಳ ಕುರಿತಾಗಿ ಹಿರಿಯ ಅಧಿಕಾರಿಗಳಾದ ಗುರುರಾಜ ದೇಶಪಾಂಡೆ ಮತ್ತು ಗೋಪಾಲ್ ಬಿ ವಿವರಿಸಿದರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್ ಕಾರ್ಯಕ್ರಮ ಆಯೋಜಿಸಿದ್ದರು. ಪ್ರೊ. ಅಲ್ಲಮಪ್ರಭು ಕೊಳಕಿ ಸಂಯೋಜಿಸಿದ್ದರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ವತಿಯಿಂದ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 15ಕ್ಕೂ ಅಧಿಕ ಪ್ರಾಧ್ಯಾಪಕರು ಪಾಲ್ಗೊಂಡಿದ್ದರು. ಕೈಗಾರಿಕಾ ಘಟಕಗಳಿಗೆ ಪ್ರಾಧ್ಯಾಪಕರು ಭೇಟಿ ನೀಡುವುದರಿಂದ ಕೈಗಾರಿಕಾ ಕ್ಷೇತ್ರದಲ್ಲಿನ ನೂತನ ತಂತ್ರಜ್ಞಾನಗಳ ಕುರಿತಾಗಿ ಅರಿವು ಹೊಂದಿ, ವಿದ್ಯಾರ್ಥಿಗಳಿಗೆ ಕೈಗಾರಿಕಾ ಕ್ಷೇತ್ರವು ಬಯಸುವ ತಂತ್ರಜ್ಞಾನದ ತಿಳುವಳಿಕೆ ನೀಡಲು ಈ ಕಾರ್ಯಕ್ರಮವು ಸಹಕಾರಿಯಾಗುವುದು ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


Powered By KhushiHost.In | 9060329333

# ಸಕ್ಕರೆ ಕಾರ್ಖಾನೆಗೆ ವಿಡಿಐಟಿ ಪ್ರಾಧ್ಯಾಪಕರ ಭೇಟಿ



»ಜನಮಾಧ್ಯಮ, ಹಳಿಯಾಳ: ಕೆಎಲ್‌ಎಸ್ ವಿಡಿಐಟಿ ಹಳಿಯಾಳದ  ಪ್ರಾಧ್ಯಾಪಕರು ಇಐಡಿ ಪ್ಯಾರಿ ಶುಗರ್ ಕಾರ್ಖಾನೆಗೆ ಜೂನ್ 13ರಂದು ಭೇಟಿ ನೀಡಿದರು. ಸಕ್ಕರೆ ಉತ್ಪಾದನೆಯಲ್ಲಿ ಬಳಸಲಾಗುವ ಕಚ್ಚಾ ವಸ್ತುಗಳು, ರಾಸಾಯನಿಕಗಳು ಹಾಗೂ ವಿವಿಧ ವಿಭಾಗದಲ್ಲಿನ ವಿದ್ಯುತ್ ಸಲಕರಣೆಗಳ ಕುರಿತಾಗಿ ಸಂಪೂರ್ಣ ಮಾಹಿತಿಯನ್ನು ಇನ್‌ಸ್ಟುಮೆಂಟೇಶನ್ ವಿಭಾಗದ ಉಪ ವ್ಯವಸ್ಥಾಪಕ ಹಾಗೂ ಮಹಾವಿದ್ಯಾಲಯದ ಇ ಆಂಡ್ ಸಿ ವಿಭಾಗದ ಮಾಜಿ ವಿದ್ಯಾರ್ಥಿ ಅರುಣ್ ಪಾಟೀಲ್ ಪ್ರಾಧ್ಯಾಪಕರುಗಳಿಗೆ ನೀಡಿದರು. ಕಬ್ಬಿನ ಸಿಪ್ಪೆಯಿಂದ ವಿದ್ಯುತ್ ಶಕ್ತಿ ತಯಾರಿಕಾ ವಿಧಾನವನ್ನು ವಿವರಿಸುತ್ತ, ವಿವಿಧ ವಿಭಾಗದಲ್ಲಿ ಅಳವಡಿಸಿರುವ ಮಾಪನ ಸಲಕರಣೆಗಳ ಕುರಿತಾಗಿ ವಿವರಿಸಿದರು. ಇಐಡಿ ಪ್ಯಾರಿ ಸಕ್ಕರೆ ಕಾರ್ಖಾನೆಯ ವಾರ್ಷಿಕ ವಹಿವಾಟು ಹಾಗೂ ಪರಿಸರ ಸಂರಕ್ಷಣೆಗೆ  ಕಾರ್ಖಾನೆಯು ತೆಗೆದುಕೊಂಡಿರುವ ಉಪಕ್ರಮಗಳ ಕುರಿತಾಗಿ ಹಿರಿಯ ಅಧಿಕಾರಿಗಳಾದ ಗುರುರಾಜ ದೇಶಪಾಂಡೆ ಮತ್ತು ಗೋಪಾಲ್ ಬಿ   ವಿವರಿಸಿದರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ  ಡಾ. ಮಹೇಂದ್ರ ದೀಕ್ಷಿತ್ ಕಾರ್ಯಕ್ರಮ ಆಯೋಜಿಸಿದ್ದರು. ಪ್ರೊ. ಅಲ್ಲಮಪ್ರಭು ಕೊಳಕಿ ಸಂಯೋಜಿಸಿದ್ದರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ವತಿಯಿಂದ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ 15ಕ್ಕೂ ಅಧಿಕ ಪ್ರಾಧ್ಯಾಪಕರು ಪಾಲ್ಗೊಂಡಿದ್ದರು. ಕೈಗಾರಿಕಾ ಘಟಕಗಳಿಗೆ ಪ್ರಾಧ್ಯಾಪಕರು ಭೇಟಿ ನೀಡುವುದರಿಂದ ಕೈಗಾರಿಕಾ ಕ್ಷೇತ್ರದಲ್ಲಿನ ನೂತನ ತಂತ್ರಜ್ಞಾನಗಳ ಕುರಿತಾಗಿ ಅರಿವು ಹೊಂದಿ, ವಿದ್ಯಾರ್ಥಿಗಳಿಗೆ ಕೈಗಾರಿಕಾ ಕ್ಷೇತ್ರವು ಬಯಸುವ ತಂತ್ರಜ್ಞಾನದ  ತಿಳಿವಳಿಕೆ ನೀಡಲು ಈ ಕಾರ್ಯಕ್ರಮವು ಸಹಕಾರಿಯಾಗುವುದು ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Main Edition
Jun 14, 2025 Page No. 4
Powered by: janamadhyama.news